**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ**
**ದಿಃ 11.06.2025**

**ಮುಂದುವರೆದ ಪಾಟೀ ಸವಾಲುಃ ಶ್ರೀ ಕೆ ಎಸ್ ಡಿ ವಕೀಲರಿಂದ**

ನನ್ನ ತಂದೆ ಲಿಂಗರಾಜಯ್ಯ ಮತ್ತು ನನ್ನ ಚಿಕ್ಕಪ್ಪ ಲಕ್ಕಪ್ಪನವರು **1974** ರಲ್ಲಿ ವಿಭಾಗ ಮಾಡಿಕೊಂಡಾಗ ಹೆಬ್ಬಾಲೆ ಗ್ರಾಮದ ಮತ್ತು ಮೊದಲಾಪುರ ಗ್ರಾಮದ ಮತ್ತು ಯಲಕ್ಕೂರು ಗ್ರಾಮದ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ . ಸರ್ವೆ ನಂ **112/1** ರಲ್ಲಿ **1** ಎಕರೆ **75** ಸೆಂಟ , **118/1** ರಲ್ಲಿ **1** ಎಕರೆ **45** ಸೆಂಟ್ , **119/5** ರಲ್ಲಿ **75** ಸೆಂಟ್ , **97/5** ರಲ್ಲಿ **1** ಎಕರೆ **42** ಸೆಂಟ್ ಹೆಬ್ಬಾಲೆ ಗ್ರಾಮಕ್ಕೆ ಸೇರಿದ್ದು , ಸರ್ವೆ ನಂ **2/34** ರಲ್ಲಿ **10** ಎಕರೆ ಇದು ಮೊದಲಾಪುರ ಗ್ರಾಮಕ್ಕೆ ಸೇರಿದ್ದು ಎಂದರೆ ಸರಿ . ಇಷ್ಟು ಸ್ವತ್ತುಗಳು ನನ್ನ ತಂದೆಯ ಭಾಗಕ್ಕೆ ಬಂದಿರುತ್ತದೆ ಎಂದರೆ ಸರಿ .ಅದೆ ರೀತಿ ನನ್ನ ಚಿಕ್ಕಪ್ಪ ಲಕ್ಕಪ್ಪ ನವರಿಗೆ ಸರ್ವೆ ನಂ **12** ರಲ್ಲಿ **1** ಎಕರೆ **25** ಸೆಂಟ್, **118, 519, 319, 419** , **68** ಮತ್ತು **58** ರಲ್ಲಿ ಒಟ್ಟು ಸುಮಾರು **10** ಎಕರೆಯಷ್ಟು ಹೋಗಿರುತ್ತದೆ ಎಂದರೆ ಸರಿ . ನನ್ನ ತಂದೆಯ ಭಾಗಕ್ಕೆ ಬಂದ ಆಸ್ತಿಗಳ ಆರ್ ಟಿ ಸಿ ನನ್ನ ತಂದೆಯ ಹೆಸರಿನಲ್ಲಿ ಇತ್ತು ಎಂದರೆ ಸರಿ . ದಿಃ **08.01.1981** ರಲ್ಲಿ ಸರ್ವೆ ನಂ **112** ರಲ್ಲಿ **1** ಎಕರೆ **66** ಸೆಂಟ್ , **118** ರಲ್ಲಿ **1** ಎಕರೆ **18** ಸೆಂಟ್ ಹಾಗೂ **119** ರಲ್ಲಿ **80** ಸೆಂಟ್ ಒಟ್ಟು **3** ಎಕರೆ **64** ಸೆಂಟ್ ಗಳನ್ನು ನನ್ನ ತಂದೆ, ಚಿಕ್ಕಪ್ಪನ ಮಗನ ಹೆಂಡತಿ ಜಯಲಕ್ಷ್ಮಿ ಎಂಬುವವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ .

ಇದೆ ನ್ಯಾಯಾಲಯದಲ್ಲಿ ಬಸಪ್ಪ ಎಂಬುವವರು ದಾವೆ ಸಂಖ್ಯೆ **22/17** ರಂತೆ ಹೂಡಿರುತ್ತಾರೆ ಎಂದರೆ ಸರಿಯಲ್ಲ. ಇದೆ ನ್ಯಾಯಾಲಯದಲ್ಲಿ ದಿಃ **08.03.2025** ರಂದು ಸದರಿ ದಾವೆಯನ್ನು ಬಗೆಹರಿಸಿಕೊಂಡು ರಾಜಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ಶಶಿಕಲಾ ಎಂಬುವವರು **4** ನೇ ಪ್ರತಿವಾದಿಯಾಗಿದ್ದರು ಎಂದರೆ ಸರಿಯಲ್ಲ. ಶಶಿಕಲಾರವರನ್ನು ಹೊರತುಪಡಿಸಿ ರಾಜಿ ಮಾಡಿಕೊಂಡಿರುತ್ತೇವೆ ಎಂದರೆ ಸಾಕ್ಷಿಯು ಸದರಿ ದಾವೆಯು ತೀರ್ಮಾನವಾಗಿರುವುದಿಲ್ಲ ಎಂದು ನುಡಿದಿರುತ್ತಾರೆ. ಎಲ್ಲಾ ದಾವೆ ಸ್ವತ್ತುಗಳು ಪಿತ್ರಾರ್ಜಿತ ಆಸ್ತಿಗಳು ನಾನು ಇಲ್ಲಾ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾ ದಂ, ಕುಶಾಲನಗರ